ವಿ. ರಶ್ಮಿ, ಭಾ. ಆ. ಸೇ.
ಸರ್ಕಾರದ ಕಾರ್ಯದರ್ಶಿ
V. RASHMI, I.A.S.
Secretary to Government

GOVERNMENT OF KARNATAKA

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ.ಪತ್ರ ಸಂಖ್ಯೆ: ಗ್ರಾಅಪ 154 ಗ್ರಾಪಂಕಾ 2013 ದಿನಾಂಕ: 31-05-2013

ಮಾನ್ಯರೆ,

ವಿಷಯ: ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮನೋಸ್ಥೈರ್ಯ ಹೆಚ್ಚಿಸಿ ಗ್ರಾಮ ಪಂಚಾಯತ್ ಹಂತದಲ್ಲಿ ಒಳ್ಳೆಯ ಆಡಳಿತ ನೀಡಲು ಅವಕಾಶ ಮಾಡಿ ಕೊಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 306 ಜಿಪಸ 2011, ದಿನಾಂಕ: 19.10.2011.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 404 ಗ್ರಾಪಂಕಾ 2011, ದಿನಾಂಕ: 14.12.2011.

----

ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಪ್ರತಿ ತಿಂಗಳು ಒಂದು ದಿನ ಕಡ್ಡಾಯವಾಗಿ ಏರ್ಪಡಿಸಿ ಪ್ರಗತಿ ಪರಿಶೀಲನೆ ಹಾಗೂ ಸಮಸ್ಯೆಯನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಈ ಹಿಂದೆ ಹಲವಾರು ಬಾರಿ ಸೂಚಿಸಲಾಗಿದೆ.

ಇದಲ್ಲದೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಎರಡು ತಿಂಗಳಿಗೊಮ್ಮೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಕರೆದು ಪ್ರಗತಿ ಪರಿಶೀಲನೆ, ತಿಳುವಳಿಕೆ, ಸಮಸ್ಯೆಗಳಿದ್ದಲ್ಲಿ ಅದನ್ನು ಪರಿಹರಿಸುವುದು ಹಾಗೂ ಸಭೆಯನ್ನು ನಡೆಸಲೂ ಸಹ ಸೂಚಿಸಲಾಗಿದೆ. ಇದಲ್ಲದೆ ಪ್ರತಿ ಪಾಕ್ಷಿಕವಾಗಿ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ನಡೆಸುವುದು.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತ್ರೈಮಾಸಿಕವಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಕರೆದು ಪ್ರಗತಿ ಪರಿಶೀಲನೆ, ಮಾಹಿತಿ, ತಿಳುವಳಿಕೆ, ಕೆಳಸ್ತರದ ಎಲ್ಲ ಅಧಿಕಾರಿಗಳಿಗೆ ಮನೋಸ್ಥೈರ್ಯ ತುಂಬುವಂತೆ ಸಭೆಯನ್ನು ನಡೆಸಲು ಈಗಾಗಲೇ ನಿರ್ದೇಶನ ನೀಡಲಾಗಿದೆ.

ಆದರೆ ಎಲ್ಲಾ ಜಿಲ್ಲೆಗಳಲ್ಲೂ ಇದು ಕ್ರಮಬದ್ಧವಾಗಿ ನಡೆಯುತ್ತಿಲ್ಲ. ಆದ ಕಾರಣ ಕೂಡಲೇ ನಿಮ್ಮ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವುದು. ಈ ವರ್ಷದಲ್ಲಿ ನಿಮ್ಮ ಜಿಲ್ಲೆಯಲ್ಲಿ ಈ ಮೂರು ಹಂತದ ಸಭೆಗಳು ನಡೆದಿರುವ ಬಗ್ಗೆ ಅನುಬಂಧದಲ್ಲಿ ಕೋರಿರುವ ನಮೂನೆಯಲ್ಲಿ ಮಾಹಿತಿ ಕಳುಹಿಸುವುದು.

ಇದನ್ನು ಅತ್ಯಂತ ಗಂಭಿರವಾಗಿ ಪರಿಗಣಿಸುವ ವಿಷಯ ಎಂದು ಅರ್ಥೈಸಿ ಕೂಡಲೇ ಮೂರು ಹಂತಗಳ ಸಭೆಯನ್ನು ನಡೆಸಲು ಕ್ರಮ ವಹಿಸುವುದು. ತೆಗೆದುಕೊಂಡಿರುವ ಕ್ರಮದ ಬಗ್ಗೆ ದಿನಾಂಕ: 10-06-2013 ರೊಳಗೆ ಸರ್ಕಾರಕ್ಕೆ ವರದಿ ನೀಡಲು ಕೋರಿದೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,
Rashmi V.

ಎಲ್ಲಾ ಜಿಲ್ಲಾ ಪಂಚಾಯತಿ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001. 3rd Floor, 3rd Stage, M.S. Building, Bangalore-560 001.
Tel. : 2238 4574 2203 2941 Fax : 080-2238 9520 E-mail : secypr-rdpr@karnataka.gov.in / rashmi.venkataraju@gmail.com

## ಅನುಬಂಧ

| ಸಭೆಯ ದಿನಾಂಕ | ಸ್ಥಳ | ಯಾರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು | ಸಭೆಯಲ್ಲಿ ಚರ್ಚಿಸಿದ ಸಂಪೂರ್ಣ ವಿಷಯಗಳ ವಿವರ | ನಡವಳಿಗಳ ಪ್ರತಿಗಳನ್ನು ಎಲ್ಲರಿಗೂ ಕಳುಹಿಸಲಾಗಿದೆಯೇ | ಪಂಚತಂತ್ರ ತಂತ್ರಾಂಶ ಮತ್ತು ಜಿಲ್ಲಾ ಪಂಚಾಯಿತಿ ವೆಬ್ ಸೈಟ್‌ನಲ್ಲಿ ಅಳವಡಿಸಲಾಗಿದೆಯೇ? |
|---|---|---|---|---|---|
| 1 | 2 | 3 | 4 | 5 | 6 |
| | | | | | |